ಕರ್ನಾಟಕ ಸರ್ಕಾರ

(ಕಂದಾಯ ಇಲಾಖೆ)

ಜಿಲ್ಲಾಧಿಕಾರಿಗಳು ಹಾಗೂ
ಜಿಲ್ಲಾ ದಂಡಾಧಿಕಾರಿಗಳ ಕಾರ್ಯಾಲಯ
ಹಾಸನ ಜಿಲ್ಲೆ,
ಹಾಸನ-573201
website:www.hassan.nic.in

ಕಛೇರಿ : 08172 - 267345,
265028, 253345
ನಿವಾಸ : 08172 - 268202
ಫ್ಯಾಕ್ಸ್ : 08172 - 265418
E-mail:deo.hassan@gmail.com

ಸಂಖ್ಯೆ:ಸಿಬ್ಬಂದಿ(1) 70/13-14

ದಿನಾಂಕ:03/10/2013

## -::ಅಧಿಕೃತ ಜ್ಞಾಪನ::-

**ವಿಷಯ:-** ಹಾಸನ ಜಿಲ್ಲಾ ಕಂದಾಯ ಘಟಕದಲ್ಲಿನ ದ್ವಿತೀಯ ದರ್ಜೆ ಸಹಾಯಕರ ಅಂತಿಮ ಜೇಷ್ಠತಾ ಪಟ್ಟಿ ದಿನಾಂಕ 01.01.2013 ರಲ್ಲಿರುವಂತೆ ಪ್ರಕಟಿಸುವ ಕುರಿತು.

**ಉಲ್ಲೇಖ:-**
1) ಈ ಕಛೇರಿಯ ಅಧಿಕೃತ ಜ್ಞಾಪನಾ ಸಂಖ್ಯೆ: ಸಿಬ್ಬಂದಿ(1)124/2012-13, ದಿನಾಂಕ: 19/11/2012.
2) ಶ್ರೀಮತಿ ಸಿ.ಎಸ್.ಬಿಂದು, ದ್ವಿ.ದ.ಸ. ತಾಲ್ಲೂಕು ಕಛೇರಿ, ಅರಕಲಗೂಡುರವರ ಮನವಿ ದಿನಾಂಕ:18/12/2012
3) ತಹಸೀಲ್ದಾರ್, ಹಾಸನ ತಾಲ್ಲೂಕುರವರ ಪತ್ರ ಸಂಖ್ಯೆ:ಸಿಬ್ಬಂದಿ(1)76/12-13, ದಿನಾಂಕ:22/03/2013.
4) ಈ ಕಛೇರಿಯ ಸಮಸಂಖ್ಯೆ ಕರಡು ಅಧಿಸೂಚನೆ ದಿನಾಂಕ:19/08/2013.

******

ಹಾಸನ ಜಿಲ್ಲಾ ಕಂದಾಯ ಘಟಕದಲ್ಲಿನ ದ್ವಿತೀಯ ದರ್ಜೆ ಸಹಾಯಕರ ಅಂತಿಮ ಜೇಷ್ಠತಾ ಪಟ್ಟಿಯನ್ನು ದಿನಾಂಕ 01/01/2012ರಲ್ಲಿರುವಂತೆ ಈ ಕಛೇರಿಯಲ್ಲಿ ಲಭ್ಯವಿರುವ ಮಾಹಿತಿಗಳ ಆಧಾರದ ಮೇಲೆ ಉಲ್ಲೇಖದ ಅಧಿಕೃತ ಜ್ಞಾಪನಾದಲ್ಲಿ ಪ್ರಕಟಪಡಿಸಲಾಗಿರುತ್ತದೆ. ಹಾಗೂ ಉಲ್ಲೇಖ(4)ರಲ್ಲಿ ದಿನಾಂಕ:01/01/2012 ರಿಂದ ದಿನಾಂಕ:31/12/2012ರವರೆಗಿನ ದಿನಾಂಕ:01/01/2013ರಲ್ಲಿದ್ದಂತೆ ಹಾಸನ ಜಿಲ್ಲಾ ಕಂದಾಯ ಘಟಕದ ದ್ವಿತೀಯ ದರ್ಜೆ ಸಹಾಯಕರ ವೃಂದದ ಹಂಗಾಮಿ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಲಾಗಿರುತ್ತದೆ. ಹಾಗೂ ಕಛೇರಿ ಮುಖ್ಯಸ್ಥರು ಸಂಬಂಧಿಸಿದ ನೌಕರರ ಗಮನಕ್ಕೆ ತರಲು ಸೂಚಿಸಲಾಗಿರುತ್ತದೆ.

ವಿಷಯದ ಬಗ್ಗೆ ಸಂಬಂಧಿಸಿದ ನೌಕರರು ತಮ್ಮ ಹೆಸರು, ಜನ್ಮ ದಿನಾಂಕ, ಸೇವೆಗೆ ಸೇರಿದ ದಿನಾಂಕ ಇತ್ಯಾದಿ ವಿವರಗಳು ತಪ್ಪಾಗಿದ್ದಲ್ಲಿ ಅಥವಾ ಹೆಸರುಗಳು ಕೈಬಿಟ್ಟು ಹೋಗಿದ್ದಲ್ಲಿ ಆಕ್ಷೇಪಣೆಗಳನ್ನು ಈ ಕರಡು ಅಧಿಕೃತ ಜ್ಞಾಪನಾದ 30 ದಿನಗಳೊಳಗಾಗಿ ಕಛೇರಿ ಮುಖ್ಯಸ್ಥರ ಮುಖಾಂತರ ಸಲ್ಲಿಸುವಂತೆ ಹಾಗೂ ಕಛೇರಿ ಮುಖ್ಯಸ್ಥರು ನೌಕರರು ನೀಡಿದ ಆಕ್ಷೇಪಣೆಗಳನ್ನು ಅವರುಗಳ ಮೂಲ ಸೇವಾವಹಿ ದಾಖಲೆಗಳೊಂದಿಗೆ ಪರಿಶೀಲಿಸಿ ಮಾಹಿತಿ ನೀಡಲು ಸೂಚಿಸಿ, ಹಂಗಾಮಿ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಿದ್ದು, ಮೂವತ್ತು(30) ದಿನಗಳ ಒಳಗಾಗಿ ಆಕ್ಷೇಪಣೆಗಳು ಬಾರದಿದ್ದಲ್ಲಿ ಯಾವುದೇ ಆಕ್ಷೇಪಣೆಗಳು ಇಲ್ಲವೆಂದು ಭಾವಿಸಿ 1957 ರ ಕರ್ನಾಟಕ ಸರ್ಕಾರಿ ನೌಕರರ ಜೇಷ್ಠತಾ ನಿಯಮಾವಳಿ ಪ್ರಕಾರ ಅಗತ್ಯ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಲಾಗಿತ್ತು.

ಉಲ್ಲೇಖ(4)ರನ್ವಯ ಪ್ರಕಟಿಸಲಾಗಿದ್ದ ಹಾಸನ ಜಿಲ್ಲಾ ಕಂದಾಯ ಘಟಕದಲ್ಲಿ ಸೇವೆ ಸಲ್ಲಿಸುತ್ತಿರುವ ದ್ವಿತೀಯ ದರ್ಜೆ ಸಹಾಯಕರ ವೃಂದದ ಹಂಗಾಮಿ ಜೇಷ್ಠತಾ ಪಟ್ಟಿಗೆ ಯಾರಿಂದಲೂ ಆಕ್ಷೇಪಣೆಗಳು ಬಂದಿರುವುದಿಲ್ಲ.

ಉಲ್ಲೇಖ(2) ಹಾಗೂ (3)ನ್ನು ಸಂಬಂಧಿಸಿದ ನೌಕರರಿಗೆ ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತಾ) ನಿಯಮಗಳು 1957ರನ್ವಯ ಸೇವಾ ಜೇಷ್ಠತೆ ದೊರಕಿಸುವ ಕಾರಣಕ್ಕಾಗಿ ಈ ಮುಂದಿನಂತೆ ಪರಿಗಣಿಸಿದೆ.

| ಕ್ರ. ಸಂ. | ಅಂತರರಾಜ್ಯ ಜೇಷ್ಠತಾ ಪಟ್ಟಿಯ ಕ್ರ.ಸಂ. | | ಹೆಸರು | ಈಗಿನ ಹುದ್ದೆ | ಜನ್ಮ ದಿನಾಂಕ | ಸೇವೆಗೆ ಸೇರಿದ ದಿನಾಂಕ | ಬಡ್ತಿ ಹೊಂದಿದ.ನೇಮಕಾತಿ ಹೊಂದಿದ ದಿನಾಂಕ | | ನೇರ ನೇಮಕಾತಿ | ಪ:ಜಾತಿ ಪ:ಪಂಗಡ | ಷರಾ |
|---|---|---|---|---|---|---|---|---|---|---|---|
| | ದ್ವಿ.ದ.ಸ. | ದ್ವಿ.ದ. ರಾ.ನಿ. | | | | | ವಾಸ್ತವಿಕ | ಅರ್ಹತಾ | | | |
| 628ಎ | | | ಸಿ.ಎಸ್.ಬಿಂದು | ದ್ವಿ.ದ.ಸ. | 18.06.1983 | 22.05.2003 | 22.05.2003 | 22.05.2003 | ನೇ.ನೇ | ಇತರೆ | ಅನುಕಂಪದ ಆಧಾರ |
| 615 | | | ಎಂ.ವಿ.ಸರಳ | ದ್ವಿ.ದ.ಸ. | 16.06.1962 | 22.02.2002 | 22.02.2002 | 22.02.2002 | ನೇ.ನೇ. | ಇತರೆ | ಅನುಕಂಪದ ಆಧಾರ |

ಹಾಗೂ 1957 ರ ಕರ್ನಾಟಕ ಸರ್ಕಾರಿ ನೌಕರರ ಜೇಷ್ಠತಾ ನಿಯಮಾವಳಿ ಪ್ರಕಾರ ದಿನಾಂಕ:01/01/2013ರಲ್ಲಿದ್ದಂತೆ ಹಾಸನ ಜಿಲ್ಲಾ ಕಂದಾಯ ಘಟಕದ ದ್ವಿತೀಯ ದರ್ಜೆ ಸಹಾಯಕರ ವೃಂದದ ಜೇಷ್ಠತಾ ಪಟ್ಟಿಯನ್ನು ಅಂತಿಮಗೊಳಿಸಿ ಆದೇಶಿಸಿದೆ.

ಈ ಅಂತಿಮ ಜೇಷ್ಠತಾ ಪಟ್ಟಿಯನ್ನು ಕಛೇರಿ ಮುಖ್ಯಸ್ಥರು ಸಂಬಂಧಪಟ್ಟ ನೌಕರರ ಗಮನಕ್ಕೆ ತರಲು ಸೂಚಿಸಿದೆ.

**ಜಿಲ್ಲಾಧಿಕಾರಿಗಳು,**
**ಹಾಸನ ಜಿಲ್ಲೆ,ಹಾಸನ**

**ಪ್ರತಿಗಳನ್ನು : ಈ ಕೆಳಕಂಡವರಿಗೆ ಮಾಹಿತಿಗಾಗಿ /ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ:**

1) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ, ವಿಧಾನ ಸೌಧ, ಬೆಂಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2) ಪ್ರಾದೇಶಿಕ ಆಯುಕ್ತರು, ಮೈಸೂರು ವಿಭಾಗ, ಮೈಸೂರುರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
3) ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು , ಜಿಲ್ಲಾ ಪಂಚಾಯ್ತಿ, ಹಾಸನ ಇವರಿಗೆ.
4) ಉಪವಿಭಾಗಾಧಿಕಾರಿಗಳು, ಹಾಸನ / ಸಕಲೇಶಪುರ ಇವರಿಗೆ.
5) ವಿಶೇಷ ಭೂಸ್ವಾಧೀನಾಧಿಕಾರಿಗಳು, ಹೇ.ಜ.ಯೋ.2, ಹಾಸನ ಇವರಿಗೆ.
6) ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ಹಾಸನ ಇವರಿಗೆ.
7) ಪ್ರಾಚಾರ್ಯರು, ಜಿಲ್ಲಾ ತರಬೇತಿ ಸಂಸ್ಥೆ, ಹಾಸನ ಇವರಿಗೆ.
8) ಎಲ್ಲಾ ತಾಲ್ಲೂಕು, ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿಗಳಿಗೆ.
9) ತಹಸೀಲ್ದಾರ್, ಹಾಸನ/ಚನ್ನರಾಯಪಟ್ಟಣ/ಹೊಳೆನರಸೀಪುರ/ಅರಸೀಕೆರೆ/ಸಕಲೇಶಪುರ/ಅರಕಲಗೂಡು/ಬೇಲೂರು/ಆಲೂರು ತಾಲ್ಲೂಕು. ಹಾಸನ ಇವರಿಗೆ.

## ಹಾಸನ ಜಿಲ್ಲೆ– ದಿನಾಂಕ 01.01.2012 ರಿಂದ 31.12.2012 ರವರೆಗೆ ಕಂದಾಯ ಇಲಾಖೆ–ದ್ವಿತೀಯ ದರ್ಜೆ ಸಹಾಯಕರ ಅಂತಿಮ ಜೇಷ್ಠತಾ ಪಟ್ಟಿ– ದಿನಾಂಕ 01.01.2013 ರಲ್ಲಿರುವಂತೆ

| ಕ್ರ. ಸಂ. | ಅಂತರರಾಜ್ಯ ಜೇಷ್ಠತಾ ಪಟ್ಟಿಯ ಕ್ರಮ | | ಹೆಸರು | ಈಗಿನ ಹುದ್ದೆ | ಜನ್ಮ ದಿನಾಂಕ | ಸೇವೆಗೆ ಸೇರಿದ ದಿನಾಂಕ | ಬಡ್ತಿ ಹೊಂದಿದ.ನೇಮಕಾತಿ ಹೊಂದಿದ ದಿನಾಂಕ | | ನೇರ ನೇಮಕಾತಿ | ಪ:ಜಾತಿ ಪ:ಪಂಗಡ | ಷರಾ |
|---|---|---|---|---|---|---|---|---|---|---|---|
| | ದ್ವಿ.ದ.ಸ. | ದ್ವಿ.ದ. ರಾ.ನಿ. | | | | | ವಾಸ್ತವಿಕ | ಅರ್ಹತಾ | | | |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 677 | | | ಚಂದ್ರಕಲಾ | ದ್ವಿ.ದ.ಸ. | 03.04.1992 | 18.05.2012 | 18.05.2012 | 18.05.2012 | ನೇ.ನೇ | ಇತರೆ | ಅನುಕಂಪದ ಆಧಾರ |
| 678 | | | ಎ.ಬಿ.ಮಂಜುನಾಥ | ದ್ವಿ.ದ.ಸ. | 04.08.1987 | 28.05.2012 | 28.05.2012 | 28.05.2012 | ನೇ.ನೇ | ಇತರೆ | ಅನುಕಂಪದ ಆಧಾರ |
| 679 | | | ಚೇತನ್ | ದ್ವಿ.ದ.ಸ. | 04.12.1984 | 07.07.2012 | 07.07.2012 | 07.07.2012 | ನೇ.ನೇ | ಇತರೆ | ಅನುಕಂಪದ ಆಧಾರ |

ಜಿಲ್ಲಾಧಿಕಾರಿಗಳು
ಹಾಸನ ಜಿಲ್ಲೆ, ಹಾಸನ.